# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 805
2. ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ್ ಅರಳಿ
3. ಉತ್ತರಿಸಬೇಕಾದ ದಿನಾಂಕ : 11.03.2020
4. ಉತ್ತರಿಸುವವರು : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು.

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೀದರ್ ಜಿಲ್ಲಾಧಿಕಾರಿಗಳು ದಿನಾಂಕ:15.02.2020ರಂದು ನೋಟೀಸ್ ಹೊರಡಿಸಿ, ಜಿಲ್ಲೆಯಾದ್ಯಂತ ಹೊಸ ಕೊಳವೆಬಾವಿ ತೋಡುವುದನ್ನು ನಿಷೇದಿಸಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವರು ಯಾವ ಆಧಾರದ ಮೇಲೆ ನಿಷೇಧಿಸಲಾಗಿದೆ; | ಹೌದು<br>ಕರ್ನಾಟಕ ಅಂತರ್ಜಲ ಅಭಿವೃದ್ಧಿ ಮತ್ತು ನಿರ್ವಹಣೆ ವಿನಿಮಯನ ಹಾಗೂ ನಿಯಂತ್ರಣ ಅಧಿನಿಯಮ 2011 ಮತ್ತು ನಿಯಮಾವಳಿ 2012 ರಲ್ಲಿ ರಾಜ್ಯದಲ್ಲಿ ಅಂತರ್ಜಲ ಅಭಿವೃದ್ಧಿ ಮತ್ತು ನಿರ್ವಹಣೆಗೆ ಸಂಬಂಧಿಸಿದಂತೆ ಸೆಕ್ಷನ್ 10 (2) ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಿದೆ.<br>" ಪ್ರಾಧಿಕಾರವು, ಈ ಅಧಿನಿಯಮದ ಉದ್ದೇಶಕ್ಕಾಗಿ ಅದರಲ್ಲಿ ನಿರ್ದಿಷ್ಟಪಡಿಸಿದಂಥ ದಿನಾಂಕದಿಂದ ಜಾರಿಗೆ ಬರುವಂತೆ ಅಧಿಸೂಚಿತ ಪ್ರದೇಶವೆಂದು ಘೋಷಿಸಲು ಸರ್ಕಾರಕ್ಕೆ ಸಲಹೆ ನೀಡತಕ್ಕದ್ದು".<br>ಹಾಗೂ ಸೆಕ್ಷನ್ 11 ರಲ್ಲಿ<br>"ಅಧಿಸೂಚಿತ ಪ್ರದೇಶದಲ್ಲಿ ಬಾವಿಯನ್ನು ಕೊರೆಯಲು ಅಥವಾ ತೋಡಲು ಇಚ್ಚಿಸಿದಲ್ಲಿ, ಆತನು ಈ ಉದ್ದೇಶಕ್ಕಾಗಿ ಅನುಮತಿಯನ್ನು ಕೋರಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಪ್ರಾಧಿಕಾರದಿಂದ ಅನುಮತಿಯನ್ನು ಪಡೆದ ಹೊರತು ಹಾಗೆ ಕೊರೆಯುವುದಕ್ಕೆ ಅಥವಾ ತೋಡುವುಕ್ಕೆ ಸಂಬಂಧಿಸಿದ ಯಾವುದೇ ಚಟುವಟಿಕೆಗೆ ತೊಡಗತಕ್ಕದಲ್ಲ".<br>ಕರ್ನಾಟಕ ಅಂತರ್ಜಲ ಪ್ರಾಧಿಕಾರವು ಕರ್ನಾಟಕ ಅಂತರ್ಜಲ ಅಧಿನಿಯಮ 2011 ರಡಿ ಅಂತರ್ಜಲ ಅತಿ ಬಳಕೆ ಪ್ರದೇಶಗಳೆಂದು ಬೀದರ್ ಜಿಲ್ಲಾ ವ್ಯಾಪ್ತಿಯಲ್ಲಿ ಯಾವುದೇ ತಾಲ್ಲೂಕುಗಳನ್ನು ಅಧಿಸೂಚಿಸಿರುವುದಿಲ್ಲ. ಕಳೆದ 10 ವರ್ಷಗಳ ಬೀದರ್ ಜಿಲ್ಲೆಯ ಅಂತರ್ಜಲ ಸ್ಥಿರಮಟ್ಟದ ಮಾಹಿತಿಯು ಈ ಕೆಳಕಂಡಂತಿದೆ: |

(ಮೀಟರ್‌ಗಳಲ್ಲಿ)

| ಕ್ರ ಸಂ | ಜಿಲ್ಲೆ | ತಾಲ್ಲೂಕು | 2010 | 2019 | 2010-2019ರ ಸರಾಸರಿ ಅಂತರ್ಜಲ ಸ್ಥಿರಮಟ್ಟದ ವ್ಯತ್ಯಾಸ ಏರಿಕೆ | ಇಳಿಕೆ |
|---|---|---|---|---|---|---|
| 1 | ಬೀದರ್ | ಔರಾದ್ | 14.86 | 24.98 | | **10.12** |
| 2 | ಬೀದರ್ | ಭಾಲ್ಕಿ | 15.79 | 20.48 | | **4.69** |
| 3 | ಬೀದರ್ | ಬಸವಕಲ್ಯಾಣ | 13.04 | 15.51 | | **2.47** |
| 4 | ಬೀದರ್ | ಬೀದರ್ | 9.48 | 15.33 | | **5.85** |
| 5 | ಬೀದರ್ | ಹುಮನಾಬಾದ್ | 9.67 | 18.54 | | **8.87** |

ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ಅಧಿನಿಯಮ, 1999 ಅಧ್ಯಾಯ 2 ಸಾರ್ವಜನಿಕ ಕುಡಿಯುವ ನೀರಿನ ಮೂಲಗಳಿಗೆ ಸಂರಕ್ಷಣಾ ಕ್ರಮಗಳು ಅಡಿ ಸೆಕ್ಷನ್ 4 ರಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಲಾಗಿದೆ.

" ಯುಕ್ತ ಪ್ರಾಧಿಕಾರವು, ತಾಂತ್ರಿಕ ಅಧಿಕಾರಿಯ ಸಲಹೆ ಮೇರೆಗೆ ಮತ್ತು ಮಳೆಯ ಪ್ರಮಾಣ ಮತ್ತು ರೀತಿಯನ್ನು ಹಾಗೂ ಸಂಭಂದಪಟ್ಟ ಇತರ

| | | |
|---|---|---|
| | | ಯಾವುದೇ ಅಂಶವನ್ನು ಗಮನದಲ್ಲಿಟ್ಟುಕೊಂಡು, ಅಧಿಕಾರ ವ್ಯಾಪ್ತಿಯುಳ್ಳ ಯಾವುದೇ ಪ್ರದೇಶದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಮೂಲಗಳ ಮೇಲೆ ಪ್ರತಿಕೂಲ ಪರಿಣಾಮವುಂಟಾಗುವ ಸಂಭವವಿದೆಯೆಂದು ಅಭಿಪ್ರಾಯ ಪಟ್ಟರೆ, ಅದು ಆದೇಶ ಹೊರಡಿಸುವ ಮೂಲಕ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ಅಂತ ಅವಧಿಗೆ, ಆದರೆ ಒಂದು ಬಾರಿಗೆ ಒಂದು ವರ್ಷವನ್ನು ಮೀರದಂತೆ, ಆ ಪ್ರದೇಶವನ್ನು ನೀರಿನ ಕೊರತೆಯಿರುವ ಪ್ರದೇಶವೆಂಬುದಾಗಿ ಘೋಷಿಸಬಹುದು"<br><br>ಅದರಂತೆ, ಬೀದರ್ ಜಿಲ್ಲೆಯಲ್ಲಿ ಕುಸಿಯುತ್ತಿರುವ ಅಂತರ್ಜಲ ಮಟ್ಟವನ್ನು ಗಮನಿಸಿ ಮುಂಬರುವ ದಿನಗಳಲ್ಲಿ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿಯುವುದನ್ನು ತಡೆಯಲು ಜಿಲ್ಲಾಧಿಕಾರಿಗಳು, ಬೀದರ್ ಜಿಲ್ಲೆ ಇವರು ದಿನಾಂಕ:15.02.2020ರ ನಡವಳಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಸತತವಾಗಿ 3 ವರ್ಷಗಳಿಂದ ಬರ ಪರಿಸ್ಥಿತಿಯಿಂದ ಮತ್ತು 2019-20ನೇ ಸಾಲಿನ ಮಂಗಾರು ಮತ್ತು ಹಿಂಗಾರು ಹಂಗಾಮುಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಮಳೆಯಾಗದೆ ಜಿಲ್ಲೆಯ ಅಣೆಕಟ್ಟು, ಕೆರೆಕಟ್ಟು ಹಾಗೂ ಬಾವಿಗಳಲ್ಲಿ ನೀರಿನ ಮಟ್ಟ ಕುಸಿತವು ತೀವ್ರವಾಗಿರುವ ಮತ್ತು ಗಣನೀಯವಾಗಿ ಅಂತರ್ಜಲ ನೀರಿನ ಮಟ್ಟವು ಸಹ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಮುಂಬರುವ ದಿನಗಳಲ್ಲಿ ಜನ ಜಾನುವಾರುಗಳ ಕುಡಿಯುವ ನೀರಿನ ತೀವ್ರ ಸಮಸ್ಯೆ ಉಂಟಾಗುವುದನ್ನು ನಿವಾರಿಸಲು ಜಿಲ್ಲಾದ್ಯಂತ ಹೊಸ ಬೋರ್‌ವೆಲ್‌ಗಳನ್ನು ಕೊರೆಯುವುದನ್ನು ನಿಷೇಧಿಸಿ ಆದೇಶಿಸಿರುತ್ತಾರೆ ಹಾಗೂ ಹೊಸ ಕೊಳವೆ ಬಾವಿ ಕೊರೆಯುವುದು ಅತೀ ಅವಶ್ಯವಾದಲ್ಲಿ ಜಿಲ್ಲಾಡಳಿತದಿಂದ ಅನುಮತಿ ಪಡೆದು ಕೊರೆಯಲು ತಿಳಿಸಿರುತ್ತಾರೆ.<br><br>ಬೀದರ್ ಜಿಲ್ಲೆಯಲ್ಲಿ ತೀವ್ರ ಕುಡಿಯುವ ನೀರಿನ ಸಮಸ್ಯೆ ಇರುವ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಜಿಲ್ಲಾಡಳಿತದಿಂದ ಅನುಮತಿ ಪಡೆದು ಕೊರೆಯಬಹುದಾಗಿದೆ. |
| ಆ | ಈ ಆದೇಶದಿಂದ ಜಿಲ್ಲೆಯ ರೈತರು ಮತ್ತು ಜನ ಸಾಮಾನ್ಯರು ಪರದಾಡುವಂತೆ ಮಾಡಿರುವುದು ಸರಿಯಾದ ಕ್ರಮವೇ; ಸರಿಯಿಲ್ಲದಿದ್ದರೆ ಈ ಆದೇಶ ಹೊರಡಿಸಿರುವ ಜಿಲ್ಲಾಧಿಕಾರಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು; ಕೈಗೊಳ್ಳದಿದ್ದಲ್ಲಿ, ಇದಕ್ಕೆ ಸರ್ಕಾರದ ನಿಲುವೇನು? | ಬೀದರ್ ಜಿಲ್ಲೆಯಲ್ಲಿ ಕುಸಿಯುತ್ತಿರುವ ಅಂತರ್ಜಲ ಮಟ್ಟವನ್ನು ಗಮನಿಸಿ ಮುಂಬರುವ ದಿನಗಳಲ್ಲಿ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿಯುವುದನ್ನು ತಡೆಯಲು ಜಿಲ್ಲಾಧಿಕಾರಿಗಳು ಈ ಕ್ರಮ ಕೈಗೊಂಡಿರುತ್ತಾರೆ. |

**ಸಂಖ್ಯೆ: ಎಂಐಡಿ 65 ಎಲ್‌ಎಕ್ಯೂ 2020**

**(ಜೆ.ಸಿ.ಮಾಧುಸ್ವಾಮಿ)**
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.